ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಶ್ರೀರಂಗಪಟ್ಟಣ

**ಸಿಸಿ 37/2017 ಸಿಡಬ್ಲೂ: 13 ಪಿ ಡಬ್ಲೂ: 10**

| | |
|---|---|
| ಹೆಸರು | ಡಾ. ಕುಮಾರ್ ಪಿ.ವೈ. |
| ತಂದೆಯ ಹೆಸರು | ಎಲ್ಲಪ್ಪ |
| ವಯಸ್ಸು | 50 ವರ್ಷ |
| ವೃತ್ತಿ | Senior specialist, Srirangapatna Government Hospital |
| ವಾಸ | ಶ್ರೀರಂಗಪಟ್ಟಣ |

ದಿನಾಂಕಃ 06.01.2025 ರಂದು ಸಾಕ್ಷಿಗೆ ಪ್ರಮಾಣ ವಚನ ನೀಡಲಾಯಿತು.

ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ

1. ನಾನು 2014 ರಿಂದ ಈವರೆಗೂ ಶ್ರೀರಂಗಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದೇನೆ.
2. ದಿನಾಂಕಃ 29.03.2017 ರಂದು ಸಂಜೆ 7 ಗಂಟೆಗೆ ರವಿಕುಮಾರ್ ಬಿನ್ ಕೃಷ್ಣಪ್ಪ ರವರು ನಾಗೇಂದ್ರ, ಸುರೇಶ್, ನಂಜುಂಡಸ್ವಾಮಿ ಮತ್ತು ರಾಜೇಶ್ ಅವರು ತಮಗೆ ದೊಣ್ಣೆಯಿಂದ ಹಲ್ಲೆ ಮಾಡಿರುವುದಾಗಿ ತಿಳಿಸಿ ಚಿಕಿತ್ಸೆಗೆ ಬಂದಿರುತ್ತಾರೆ. ಸದರಿಯವರನ್ನು ಪರೀಕ್ಷಿಸಲಾಗಿ ಅವರಿಗೆ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ.

   1) Abro -laceration 2 X 2cm over right ankle.

   2) Abro- laceration 5 X 5cm over left fore arm.

3. ಸದರಿ ಮೇಲೆ ಹೇಳಿರುವ ಗಾಯಗಳು ಸಾಧಾರಣ ಸ್ವರೂಪದ ಗಾಯಗಳಾಗಿರುತ್ತವೆ. ಸಾಕ್ಷಿ ಗಾಯದ ಪ್ರಮಾಣ ಪತ್ರವನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ 7 ಎಂದು, ಸಾಕ್ಷಿಯ ಸಹಿಯನ್ನು ನಿಪಿ 7(ಎ) ಎಂದು ಗುರುತಿಸಲಾಗಿದೆ.

4. ಅದೇ ದಿನ ಲಕ್ಷ್ಮೀ ಕೋಂ ರವಿಕುಮಾರ್ ರವರು ನಾಗೇಂದ್ರ, ಸುರೇಶ್, ನಂಜುಂಡಸ್ವಾಮಿ ಮತ್ತು ರಾಜೇಶ್ ಅವರು ತಮಗೆ ದೊಣ್ಣೆಯಿಂದ ಹಲ್ಲೆ ಮಾಡಿರುವುದಾಗಿ ತಿಳಿಸಿ ಚಿಕಿತ್ಸೆಗೆ ಬಂದಿರುತ್ತಾರೆ. ಸದರಿಯವರನ್ನು ಪರೀಕ್ಷಿಸಲಾಗಿ ಅವರಿಗೆ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ.

1) Tenderness over both thighs.

5. ಸದರಿ ಮೇಲೆ ಹೇಳಿರುವ ಗಾಯ ಸಾಧಾರಣ ಸ್ವರೂಪದ ಗಾಯಗಳಾಗಿರುತ್ತವೆ. ಸಾಕ್ಷಿ ಗಾಯದ ಪ್ರಮಾಣ ಪತ್ರವನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ 8 ಎಂದು, ಸಾಕ್ಷಿಯ ಸಹಿಯನ್ನು ನಿಪಿ 8(ಎ) ಎಂದು ಗುರುತಿಸಲಾಗಿದೆ.

6. ನಾನು ಹೇಳಿರುವ ಗಾಯಗಳು ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ಎಂ ಒ 1 ಮತ್ತು 2 ರಲ್ಲಿ ಹೊಡೆದಾಗ ಆಗಬಹುದು ಎಂದರೆ ಸರಿ.

<u>ಪಾಟೀ ಸವಾಲುಃ ಆರೋಪಿತರ ಪರಃ ಶ್ರೀ ಸಿ ಪಿ ಎಂ ವಕೀಲರಿಂದಃ</u>

7. ನಾನು ರವಿಕುಮಾರ್ ಅವರಿಗೆ ಸಂಬಂಧಿಸಿದಂತೆ ಹೇಳಿರುವ ಗಾಯಗಳು ಒಂದು ಚೂಪಾದ ವಸ್ತು ಮೇಲೆ ಬಿದ್ದಾಗ ಆಗಬಹುದು ಎಂದರೆ ಸರಿ. ನಿಪಿ7 ಮತ್ತು 8 ರಲ್ಲಿ ನಾನು ಗಾಯಗಳು ಹೊಸ ಗಾಯಗಳು ಅಥವಾ ಹಳೆ ಗಾಯಗಳು ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಾನು ಲಕ್ಷ್ಮೀ ಅವರಿಗೆ ಸಂಬಂಧಿಸಿದಂತೆ ಹೇಳಿರುವ ಗಾಯಗಳು ಹೆಚ್ಚು ಹೊತ್ತು

ನಿಂತಲ್ಲಿ, ಅವರಿಗೆ ಸಹಜ ಖಾಯಿಲೆ ಇದ್ದಲ್ಲಿ ಕಂಡು ಬರುತ್ತದೆ ಎಂದರೆ ಸಾಕ್ಷಿ ಅದು ಆ ರೀತಿಯಾದರೆ ಪೂರ್ತಿ ಕಾಲು ಊತ ಬರಬೇಕು ಎಂದು ನುಡಿಯುತ್ತಾರೆ. ಕಾಲಿನಲ್ಲಿ ಯಾವುದಾದರೂ ತೊಂದರೆ ಇದ್ದರೆ ಕಾಲು ಊತ ಆಗುವ ಸಾಧ್ಯತೆ ಇದೆ ಎಂದರೆ ಸರಿ. ಎಂ ಒ 1 ಮತ್ತು 2 ಅನ್ನು ಪೊಲೀಸರು ನನಗೆ ತೋರಿಸಿ ಯಾವುದೇ ಅಭಿಪ್ರಾಯ ಪಡೆದುಕೊಂಡಿರುವುದಿಲ್ಲ.

ಮರು ವಿಚಾರಣೆ ಇಲ್ಲ.

*ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.*

*ಓ ಹೇ ಕೆ ಸ ಇ ಒ*

*ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು*

*ಶ್ರೀರಂಗಪಟ್ಟಣ.*